

ಆನೆಗಳಿಗೆ ಮೀಯುವ ಸುಖ, ಚಿಣ್ಣರಿಗೆ ನೋಡುವ ಸುಖ

# ಊರಿಗೆ ಬಂದವು ಆನೆಗಳು

ಕೊರೊನಾ ದೆಸೆಯಿಂದಾಗಿ ಅನೇಕರ ಉದ್ಯೋಗಗಳಿಗೆ ಕುತ್ತು ಒದಗಿದೆಯಷ್ಟೇ. ಥಾಯ್ಲೆಂಡ್‌ನಲ್ಲಿ ಆನೆಗಳಿಗೀಗ ನಿರುದ್ಯೋಗದ ಸಮಯ.

ಆನೆಗಳಿಗೆಂತಹ ಉದ್ಯೋಗ ಎಂದಿರಾ? ಹೌದು, ಆನೆಗಳೂ ದುಡಿಯುತ್ತವೆ. ಆದರೆ ಅವು ಕೆಲಸ ಮಾಡುವುದು ತಮಗಾಗಿಯಲ್ಲ; ತಮ್ಮನ್ನು ಹಿಡಿದು ಪಳಗಿಸಿದ ಮನುಷ್ಯರಿಗಾಗಿ.

ಥಾಯ್ಲೆಂಡ್‌ನ ಅಮ್ಯೂಸ್‌ಮೆಂಟ್ ಪಾರ್ಕ್‌ಗಳ ಆಕರ್ಷಣೆಗಳಲ್ಲಿ ಆನೆಗಳೂ ಸೇರಿವೆ. ಸುಮಾರು 3000 ಆನೆಗಳು ಅಮ್ಯೂಸ್‌ಮೆಂಟ್ ಪಾರ್ಕ್‌ಗಳಲ್ಲಿ ದುಡಿಯುತ್ತಿವೆ. ಆ ಆನೆಗಳಿಗೂ ಕೊರೊನಾದ ಝಳ ತಾಗಿದೆ. ಮಾರ್ಚ್ ಮಧ್ಯ ಭಾಗದಲ್ಲಿ ಕೊರೊನಾ ಸೋಂಕಿನ ಭೀತಿ ಹೆಚ್ಚುತ್ತಿದ್ದಂತೆ, ಥಾಯ್ಲೆಂಡ್‌ನ ಮನರಂಜನಾ ಕೇಂದ್ರಗಳು ಬಾಗಿಲು ಹಾಕಿದವು. ಹಾಗಾಗಿ, ಅಲ್ಲಿ ಕೆಲಸ ಮಾಡುತ್ತಿದ್ದ ಆನೆಗಳು ಹಾಗೂ ಅವುಗಳನ್ನು ನೋಡಿಕೊಳ್ಳುತ್ತಿದ್ದ ಮಾವುತರು ನಿರುದ್ಯೋಗಿಗಳಾದರು.

ಪ್ರವಾಸೋದ್ಯಮ ಕಳಾಹೀನವಾಗುತ್ತಿದ್ದಂತೆ ಮನರಂಜನಾ ಕೇಂದ್ರಗಳು ಸ್ಥಗಿತಗೊಳ್ಳುವುದು ಸಹಜ. ಆದರೆ, ಇದರ ದುಷ್ಪರಿಣಾಮ ಉಂಟಾದುದು ಆನೆಗಳ ಮೇಲೆ. ಮಾವುತರೇ ಉಪವಾಸ ಇರಬೇಕಾದ ಸಂದರ್ಭ ಒದಗಿದಾಗ, ಆನೆಗಳ ಹೊಟ್ಟೆ ತುಂಬಿಸುವುದು ಹೇಗೆ? ಕಷ್ಟಕಾಲದಲ್ಲಿ ಮಾವುತರಿಗೆ ನೆನಪಾದುದು ಊರಿನ ದಾರಿ. ಗಂಟುಮೂಟೆ, ಪರಿವಾರದ ಜೊತೆಗೆ ಆನೆಗಳನ್ನೂ ಕರೆದುಕೊಂಡು ತವರಿನ ದಾರಿ ಹಿಡಿದರು. ಈ ರೂಪದಲ್ಲಿ, ಕಳೆದ ಎರಡು ತಿಂಗಳುಗಳಲ್ಲಿ ಸಾವಿರಕ್ಕೂ ಹೆಚ್ಚು ಆನೆಗಳು ಹಾಗೂ ಅವುಗಳ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದವರು ತಂತಮ್ಮ ಹಳ್ಳಿಗಳಿಗೆ ವಾಪಸ್ಸಾಗಿದ್ದಾರೆ. ಹಳ್ಳಿಯ ಹೊಳೆ ಹಾಗೂ ಹಸಿರು ಸದ್ಯಕ್ಕೆ ಆನೆಗಳನ್ನು, ಮಾವುತರನ್ನು ಪೊರೆಯುತ್ತಿವೆ. ಕಷ್ಟಕಾಲದಲ್ಲಿ 'ಓ' ಎನ್ನುವುದು ಹುಟ್ಟಿದೂರೇ ಅಲ್ಲವೇ?